ಶ್ರಾವಂತಿ. ಬೇಸಿಗೆ ರಜೆ. ಅಂದರೆ ಇನ್ನೆರಡು ತಿಂಗಳು ಕೇತಕಿ ಈ ಮನೆಯಲ್ಲಿ ಠಿಕಾಣಿ. ಪೋಕರಿ ಕರ್ಣನ ಕುರಿತು ತಲೆ ಕೆಡಿಸಿಕೊಳ್ಳಬೇಕಾದ ಪ್ರಮೇಯ ಇಲ್ಲ. ಕಣ್ಣಗೊಂಬೆಯ ಹಾಗೆ ಕಾಪಾಡಿಕೊಳ್ಳುತ್ತಾಳೆ ಕೇತಕಿ. ಎರಡು ತಿಂಗಳ ರಜೆ ಮುಗಿದು ಅವಳು ವಾಪಸು ಹೋಗುವಾಗ ಮನೆಯವರೆಲ್ಲರ ತೂಕ ಎರಡು ಕೆ.ಜಿ.ಯಷ್ಟಾದರೂ ಹೆಚ್ಚಾಗುವುದು ನಿಶ್ಚಿತ. ಇದು ಬರೀ ಹೇಳಿಕೆ ಮಾತಲ್ಲ. ತೂಕದ ಮಿಷನ್ನು ಬಿಟ್ಟು ಕೊಡುವ ರಹಸ್ಯ. ಶ್ರಾವಂತಿಗೆ ತನ್ನ ದೇಹಾಕೃತಿಯ ಕುರಿತಾಗಿ ಸದಾ ಕಾಳಜಿ. ವಾರಕ್ಕೆ, ಹದಿನೈದು ದಿನಕ್ಕೆ ಒಮ್ಮೆ ತೂಕ ನೋಡಿಕೊಳ್ಳುತ್ತಾ, ಅರ್ಧ ಕೆ.ಜಿ. ತೂಕ ಹೆಚ್ಚಾದರೂ ಆಗಸ ಕಳಚಿ ಬಿದ್ದಂತೆ ಬೆಚ್ಚುತ್ತಾ, ಆಮೇಲೊಂದಷ್ಟು ದಿನ ಊಟತಿಂಡಿಗಳ ವಿಚಾರದಲ್ಲಿ ಕಟ್ಟೆಚ್ಚರ. ಕುರುಕಲು ತಿಂಡಿಗಳಿಗೆ ವಿದಾಯ. ಗಾದೆ ನೆನಪಾಗುತ್ತಿತ್ತು ನಕುಲನಿಗೆ, 'ಪಡೆದಿದ್ದು ಉಣ್ತೇಯೋ, ದುಡಿದದ್ದು ಉಣ್ತೇಯೋ...' ಎನ್ನುವ ಗಾದೆ ಮಾತನ್ನು ಆಗೀಗ ಉರು ಹಾಕುತ್ತಿರುತ್ತಿದ್ದಳು ಅಕ್ಕ, ಅವಳು ಬದುಕಿದ್ದಾಗ. ಬಾಲ್ಯದಲ್ಲಿ ಹೊಟ್ಟೆ ತುಂಬಾ ಉಣ್ಣಲು ತತ್ವಾರವಾದ್ದರಿಂದ ಇರಬೇಕು, ಊಟತಿಂಡಿಗಳಲ್ಲಿ ಚೌಕಾಶಿ ಮಾಡುತ್ತಿರಲಿಲ್ಲ ನಕುಲ. ಚಿಕ್ಕವನಿದ್ದಾಗ ಸದಾ ಜಠರಾಗ್ನಿ ನಿಗಿನಿಗಿಸುತ್ತಾ, ಅಪರೂಪಕ್ಕೊಮ್ಮೊಮ್ಮೆ ಸಮಾರಂಭದ ಊಟಕ್ಕೆ ಕರೆದವರ ಮನೆಯಲ್ಲಿ ಮೂಗಿನ ಮಟ್ಟ ಉಂಡರೂ ಎರಡನೇ ಪಂಕ್ತಿಗೆ ಕೂತರೆ ಮತ್ತೂ ಒಂದು ಮುಷ್ಟಿ ಉಂಡು ಜೀರ್ಣಿಸಿಕೊಳ್ಳಬಲ್ಲೆನೆಂಬ ಹಪಾಹಪಿ. 'ಎಲ್ಲೂ ಮರ್ಯಾದೆ ಕಳೀಬಾರ್ದು. ಹೊಟ್ಟೆಗಿಲ್ಲದೋವು ಅನ್ನಿಸ್ಕೋಬಾರ್ದು...' ಬುದ್ಧಿಮಾತು ಹೇಳುತ್ತಿರುತ್ತಿದ್ದಳು ನರ್ಮದಕ್ಕ. ಈಗ ನೆನೆಸಿಕೊಂಡರೆ ಮುಜುಗರವಾಗುತ್ತದೆ ನಕುಲನಿಗೆ. ಊಟಕ್ಕೆ ಬಡಿಸುವ ಭಕ್ಷ್ಯಗಳನ್ನು ಎಲೆಗೆ ಹಾಕಿಸಿಕೊಂಡು ತಿಂದರೆ ಉಣ್ಣುವ ಅನ್ನದ ಪ್ರಮಾಣ ಕಡಿಮೆಯಾಗುತ್ತದೆಯೆಂಬ ಮುನ್ನೆಚ್ಚರಿಕೆಯಲ್ಲಿ ವಿಶೇಷದ ತಯಾರಿಯ ತಿನಿಸುಗಳನ್ನು ಎಡಗೈಯಲ್ಲಿ ತೆಗೆದುಕೊಂಡು, ಪಕ್ಕದಲ್ಲಿ ಕಾಯ್ದಿರಿಸಿಕೊಂಡಿರುತ್ತಿದ್ದ ಬಾಳೆಲೆ ಸಿಗುಳಿಗೆ ವರ್ಗಾಯಿಸಿಕೊಂಡು, ಮನೆಗೆ ಬಂದ ಮೇಲೆ ತಿಂದರೆ ಖರ್ಚಾಗುತ್ತದೆಯೆನ್ನುವಂತೆ ಇಷ್ಟಿಷ್ಟೇ ನಾಲಿಗೆಯ ಮೇಲಿರಿಸಿಕೊಂಡು ಸವಿಯುತ್ತಾ ಸ್ವರ್ಗಕ್ಕೆ ಕಿಚ್ಚು. ವಿಶೇಷಕಟ್ಲೆಗಳಲ್ಲಿ ಅವರಿವರ ಮನೆಗೆ ಅಡುಗೆ ಸಹಾಯಕಿಯಾಗಿ ಹೋಗುತ್ತಿದ್ದ ನರ್ಮದಕ್ಕ ಮನೆಯವರು ಕೃಪೆದೋರಿ ಏನಾದರೂ ಕೊಟ್ಟು ಕಳಿಸಿದರೆ ಅಷ್ಟೈಶ್ವರ್ಯ ಎಂಬಂತೆ ಅದನ್ನು ಎದೆಗೊತ್ತಿಕೊಂಡು ತಂದು ಮಕ್ಕಳಿಬ್ಬರಿಗೆ ಹಂಚುತ್ತಿದ್ದಳು. ತನ್ನ ಮಗಳು ಎಂದು ಕೇತಕಿಗೆ ಹೆಚ್ಚಲ್ಲ, ತಮ್ಮ ಎಂದು ನಕುಲನಿಗೆ ಕಮ್ಮಿಯಲ್ಲ. ಆ ದಿನಗಳೇ ಬಹುಶಃ ಹಾಗಿದ್ದುವು. ಜನರ ಕೈಲಿ ದುಡ್ಡು ಕುಣಿಯುತ್ತಿರಲಿಲ್ಲ. ಆದರೆ ವಿಶ್ವಾಸಕ್ಕೆ ಬರ ಇರುತ್ತಿರಲಿಲ್ಲ. ನಕುಲ, ಕೇತಕಿಯರಂತೆ ಎಡಗೈ ಬುಡದಲ್ಲಿ ಬಾಳೆಲೆ ಸಿಗುಳು ಇಟ್ಟುಕೊಳ್ಳುತ್ತಿದ್ದವರು ಕೆಲವರಾದರೂ ಇರುತ್ತಿದ್ದರು ಮತ್ತು ಬಡಿಸಲು ಬಂದವರು ನಿರ್ವಂಚನೆಯಿಂದ ಬಡಿಸುತ್ತಿದ್ದರು. ಉಣ್ಣಲು ಕೂತವರು ಯಥಾನುಶಕ್ತಿ ಉಣ್ಣುತ್ತಿದ್ದರು. ಹಾಗಾಗಿ ನರ್ಮದಕ್ಕನಿಗೆ ಅದೊಂದು ಅವಮಾನದ ಸಂಗತಿಯೆಂದೋ, ಅತಿರೇಕದ್ದೆಂದೋ ಅನಿಸುತ್ತಿರಲಿಲ್ಲ. ಎಲ್ಲಾ ಹೇಳಿದರೆ ಕಥೆಯಂತೆ ಕೇಳಿಸಿಕೊಳ್ಳುತ್ತಾಳೆ ಶ್ರಾವಂತಿ. 'ಬದುಕೋದಕ್ಕಾಗಿ ತಿನ್ನುವುದಲ್ಲ, ತಿನ್ನೋದಕ್ಕಾಗಿ ಬದುಕೋದು' ಎಂದು ವ್ಯಂಗ್ಯವೋ, ಹಾಸ್ಯವೋ ಕುಟುಕುತ್ತಾಳೆ. "ಅರೆಹೊಟ್ಟೆ ಸಂಕಟ ನಿಂಗೇನು ಗೊತ್ತಿದೆ?" ನಕುಲ ಪ್ರತ್ಯುತ್ತರಿಸುತ್ತಾನೆ. ಶ್ರಾವಂತಿ ಉಳ್ಳವರ ಮನೆಯಲ್ಲಿ ಹುಟ್ಟಿ ಬೆಳೆದ ಸುಕುಮಾರಿ. ಡಿಗ್ರಿ ಮುಗಿದ ಮೇಲೆ ಕೆಲಸ ಹುಡುಕಿಕೊಳ್ಳಬೇಕಾದ ಯಾವ ಅನಿವಾರ್ಯತೆಯೂ ಅವಳಿಗಿರಲಿಲ್ಲ. 'ಮಾಸ್ಟರ್ ಡಿಗ್ರಿ ಮಾಡು...' ಎಂದು ಮನೆಯಲ್ಲಿ ಬೆಣ್ಣೆ ಹಚ್ಚಿದರೆ ಮುಂದೆ ಓದಲು ಅವಳಿಗೆ